privilege or something else but right now I am concerned with the notice Shri Kharge has given. I will consider it and I will certainly— I have taken the sense of this House and I will give a ruling on this.

SRI K. B. KOLIWAD.—Before giving the ruling, I would like to say. ಶ್ರೀಮಾನ್ ಹೆಗಡೆಯವರ ಸ್ಟೇಟ್‌ಮೆಂಟ್‌ನಿಂದ ಕರ್ನಾಟಕ ಸರ್ಕಾರದ ಮೇಲೆ ಸಂಶಯ ಪಡತಕ್ಕಂಥ ಪರಿಸ್ಥಿತಿ ಇರುವಾಗ ಮತ್ತು ಈ ಪರಿಸ್ಥಿತಿಯನ್ನು, ನಾವು ಕರ್ನಾಟಕ ರಾಜ್ಯದ ಜನತೆಗೆ ಸರ್ಕಾರದ ನಿಲುವನ್ನು ತಿಳಿಸಿ ಕೊಡತಕ್ಕಂಥದ್ದು ನಮ್ಮ ಕರ್ತವ್ಯ. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದರು. ಕರ್ನಾಟಕ ಸರ್ಕಾರದ ಪಾತ್ರ ಇದರಲ್ಲಿ ಏನೂ ಇಲ್ಲ ಎನ್ನತಕ್ಕಂಥದ್ದನ್ನು ಹೇಳಿದರು. ಈಗ ಜನರಿಗೆ ಒಂದು ಕನ್‌ಫ್ಯೂಷನ್ ಆಗಿಬಿಟ್ಟಿದೆ. ಲೂಜ್ ಶೀಟ್‌ಗಳನ್ನು ಫೈಲ್‌ನಲ್ಲಿ ತುರುಕಿದ್ದಾರೆ ಎಂದು ಕರ್ನಾಟಕ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥ ಒಂದು ಕೆಲಸ ಆಗಿದೆ. I request the Chair Kindly to permit the Hon. Minister to make the statement regarding the stand of the Government before giving the ruling.

ANNOUNCEMENT

MR. SPEAKER.—I am very happy to inform the Hon. Members that Shri Joythirmay Nath, Hon'ble Speaker of the Tripura Legislative Assembly and Mrs. Jyotirmay Nath are present here in the Gallery. On your behalf and on my behalf I extend a very hearty welcome to them.

ರಾಜ್ಯದ ಕೆಲವು ಭಾಗಗಳಲ್ಲಿ ಅತಿವೃಷ್ಟಿಯಿಂದ ಜನರಿಗೆ ತೊಂದರೆಯಾಗಿರುವುದು

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯಲ್ಲಿ ಸತತವಾಗಿ ಬಿದ್ದ ಮಳೆಯಿಂದ ಬಹಳ ಜನರಿಗೆ ತೊಂದರೆಯಾಗಿದೆ, ಅಸ್ತವ್ಯಸ್ತವಾಗಿದೆ. ಈ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇವತ್ತು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ಅಲ್ಲಿ ಬಹಳ ಮಳೆಯಾದ ಕಾರಣ ಜನರಿಗೆ ಬಹಳ ತೊಂದರೆಯಾಗಿದೆ, ಎಲ್ಲ ಕಡೆ ಸೇತುವೆ ಬಿದ್ದು ಹೋಗಿದೆ, ಯಾದ್ಗೀರ್‌ನಲ್ಲೂ ಆಗಿದೆ. ಈ ತರಹದ ಘಟನೆ ಅಲ್ಲಿ ಅದಕಾರಣ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ನಾನು ಮನವಿಮಾಡಿಕೊಳ್ಳುತ್ತಾ ಇದ್ದೇನೆ. ಮಳೆಯಿಂದ ಜನರಿಗೆ ಏನು ತೊಂದರೆಯಾಗಿದೆ ಅವರಿಗೆ ಪರಿಹಾರ ಕೊಡಬೇಕು. ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳನ್ನು ಅಲ್ಲಿ ಕಳಿಸಿಕೊಟ್ಟರೆ ಅವರು ಸ್ಥಳದಲ್ಲಿ ಹೋಗಿ ಏನೇನು ಅನಾನುಕೂಲತೆಯಾಗಿದೆ ಅದನ್ನು ನೋಡಿ ನಿವಾರಣೆ ಮಾಡುವುದಕ್ಕೆ ಅನುಕೂಲ ವಾಗುತ್ತದೆ.

ಶ್ರೀ ವೀರೇಂದ್ರಪಾಟೀಲ್.— ಇದಕ್ಕೆ ಚರ್ಚೆ ಬೇಡ. ಮಾನ್ಯ ಸದಸ್ಯರು ಈಗ ಗುಲ್ಬರ್ಗ ಮತ್ತು ಬೀದರ್‌ನಲ್ಲಿ ಅತಿವೃಷ್ಟಿಯಿಂದ ಮನೆಗಳು, ರಸ್ತೆಗಳು ಬಹಳಮಟ್ಟಿಗೆ ಹಾಳಾಗಿವೆ ಎಂದು ಏನು ಹೇಳಿದ್ದಾರೆ, ಆ ಸುದ್ದಿ ನನಗೂ ಬಂದಿದೆ. ಆ ಭಾಗದಲ್ಲಿ ಸಾಮಾನ್ಯವಾಗಿ ಹೆಚ್ಚು ಮಳೆ ಆಗುವಹಾಗಿಲ್ಲ ಅಂತಹ ಒಂದು ಪರಿಸ್ಥಿತಿ ಇದ್ದಾಗ ಬಹುಶ: ಈ ಮಳೆ ಆಗಿದ್ದು ಕ್ಲೌಡ್ಸ್ ಬರ್ಸ್ಟ್‌ನಿಂದ ಮಳೆಯಾಯಿತೆಂತೆ ಕಾಣಿಸುತ್ತದೆ. ಇನ್ನೂ ನನಗೆ ವಿವರಗಳು ಬಂದಿಲ್ಲ. ಆದಕ್ಕಾಗಿ ಇದೀಗ ನನ್ನ ಸಹೋದ್ಯೋಗಿ ಗಳಾದಂಥ ಪುಟ್ಟಸ್ವಾಮಿಗೌಡರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಅವರು ಇವತ್ತು ಸಾಯಂಕಾಲ ಹೈದರಾಬಾದ್‌ಗೆ ಹೋಗಿ, ಹೈದರಾಬಾದ್ ನಿಂದ ನಾಳೆ ಬೀದರ್‌ಗೆ ಹೋಗಿ ನಾಡಿದ್ದು ಗುಲ್ಬರ್ಗ ಕಡೆಗೆ ಹೋಗಿ, ಸ್ವತ: ಪರಿಸ್ಥಿತಿಯನ್ನು ಅಧ್ಯಯನ ಮಾಡಿ ತಿಳಿದುಕೊಂಡು, ಆ ಭಾಗದಲ್ಲಿ ರುವಂಥ ರಸ್ತೆಗಳ ರಿಪೇರಿಯಾಗಲಿ ಅಥವಾ ತೊಂದರೆಗೆ ಒಳಗಾದಂಥ ಜನರಿಗಾಗಲಿ ಅಥವಾ ಮತ್ತಾವ ರೀತಿಯಿಂದಲಾದರೂ ಹಾನಿಯಾಗಿದ್ದರೆ ಅದನ್ನು ಯಾವರೀತಿಯಿಂದ ಸರಿಪಡಿಸಬಹುದು ಎನ್ನುವಂಥ ಪೂರ್ತಿ ಅಧಿಕಾರ ಅವರು ಇಟ್ಟುಕೊಂಡು ಹೋಗುತ್ತಾ ಇದ್ದಾರೆ. ಎಲ್ಲೆಲ್ಲಿ ರಸ್ತೆಗಳ ರಿಪೇರಿ, ಮತ್ತೊಂದು ರಿಪೇರಿ ಮಾಡಬೇಕಾಗಿದೆಯೋ ಅದನ್ನು ನೋಡಿ ಸ್ಥಾನಿಕವಾಗಿ ನೀವು ಅಧಿಕಾರಿಗಳಿಗೆ ಆರ್ಡರ್ ಕೊಟ್ಟು ಅದನ್ನು ಸರಿಪಡಿಸಬೇಕು ಎಂದು ಅವರಿಗೆ ಹೇಳಿದ್ದೇನೆ. ಇವತ್ತು ಸಾಯಂಕಾಲ